**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 336/2015 ಸಿ.ಡಬ್ಲ್ಯೂ –೧ ಪಿ.ಡಬ್ಲ್ಯೂ -೨

| | | |
|---|---|---|
| ಹೆಸರು | ಃ | ಫಕೀರಸಾಬ |
| ತಂದೆಃ ಗಂಡ | ಃ | ರಸೂಲಸಾಬ |
| ವಯಸ್ಸು | ಃ | ೩೨ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಮಾಡಿಯಾಳ |

ದಿನಾಂಕಃ ೨೫.೦೩.೨೦೨೫
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ನಂ.೧ ಮತ್ತು ೨ ನನ್ನ ದೊಡ್ಡಪ್ಪಂದಿರು, ಆರೋಪಿ ನಂ.೩ ಮತ್ತು ೪ ನನ್ನ ಅಣ್ಣ ಮತ್ತು ಅತ್ತಿಗೆ ಆಗಬೇಕು. ಚಾಸಾ-೨ ರಿಂದ ೬ ರವರ ಪರಿಚಯ ಇರುತ್ತದೆ.

ದಿ.೨೦.೦೨.೨೦೧೫ ರಂದು ಸಾಯಂಕಾಲ ೫.೩೦ ಗಂಟೆಗೆ ನಮ್ಮ ಹೊಲದಲ್ಲಿ ಬೋರ್ ಖರಾಬ್ ಆಗಿತ್ತು, ಅದನ್ನು ರಿಪೇರಿ ಮಾಡಿಸುವ ಸಲುವಾಗಿ ಲಾರಿ ಬರಲು ದಾರಿ ಮಾಡುತ್ತಿದ್ದೆವು. ಆರೋಪಿತರು ನಮ್ಮ ಬಾಜು ಇರುವ ಜಮೀನನ್ನು ಲಾವಣಿ ಮಾಡುತ್ತಿದ್ದರು. ಆ ಜಮೀನಿನ ಮಾಲೀಕರ ಮಾತನ್ನು ಕೇಳಿಕೊಂಡು ಸ್ವಲ್ಪ ದಾರಿ ಮಾಡಿಕೊಂಡಿದ್ದೆವು. ಆಗ ಆರೋಪಿ ನಂ.೧ ಮತ್ತು ೩ ರವರು ಅವಾಚ್ಯ ಶಬ್ದಗಳಿಂದ ಬಯ್ಯುತ್ತಾ ಬಂದರು, ಆರೊಪಿ ನಂ.೧ ರವರ ಕೈಯಲ್ಲಿ ಕೊಯ್ತಾ ಇತ್ತು, ಅದನ್ನು ತೆಗೆದುಕೊಂಡು ನನಗೆ ಹೊಡೆದರು, ನಾನು ತಪ್ಪಿಸಿಕೊಂಡೆನು ನಂತರ ನಾನು ತಪ್ಪಿಸಿಕೊಂಡು ಓಡಿ ಹೋಗುತ್ತಿರುವಾಗ ಆರೋಪಿ ನಂ.೩ ಕಲ್ಲು ತೆಗೆದುಕೊಂಡು ಹೊಡೆದಿರುತ್ತಾರೆ, ಅದು ನನ್ನ ಮುಂಡಿಗೆ ಹತ್ತಿ ನನಗೆ ತೀವ್ರ ಸ್ವರೂಪದ ಗಾಯವಾಗಿರುತ್ತದೆ. ಆರೋಪಿ ನಂ.೪ ಕೈಯಿಂದ ನನ್ನ ಬೆನ್ನಿಗೆ ಹೊಡೆದಿರುತ್ತಾರೆ. ಆರೋಪಿ ನಂ.೨ ರವರು ಅವಾಚ್ಯ ಶಬ್ದಗಳಿಂದ ಬೈದು ಖಲಾಸ ಮಾಡಿ ಎಂದು ಪ್ರಚೋದನೆ ನೀಡಿರುತ್ತಾರೆ. ಸದರಿ ಜಗಳವನ್ನು ಚಾಸಾ-೪ ರಿಂದ ೬ ರವರು ಬಿಡಿಸಿರುತ್ತಾರೆ, ಯಾರೋ ನನ್ನ ತಂದೆಗೆ ವಿಷಯ ಹೇಳಿರುತ್ತಾರೆ, ಅವರು ನಂತರ ಬಂದು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಮ್ಮ ತಂದೆ ಬಂದ ನಂತರವೂ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನನ್ನ ತಂದೆ ನನ್ನನ್ನು ಗುಲಬರ್ಗಾ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ. ಪೋಲಿಸರು ದಿ. ೨೧.೦೨.೨೦೧೫ ರಂದು ಬಂದು ನನ್ನ ಫಿರ್ಯಾದಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪಿರ್ಯಾದಿಯನ್ನು ನಿಪಿ-೨ ಎಂದು, ಸಹಿಯನ್ನು ನಿಪಿ-೨(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಕೊಯ್ತಾ ಮತ್ತು ಕಲ್ಲನ್ನು ತೋರಿಸಿ ಆರೋಪಿತರು ಇದೇ ಕೊಯ್ತಾ ಮತ್ತು ಕಲ್ಲಿನಿಂದ ಹೊಡೆದಿದ್ದಾರಾ ಎಂಥರೆ ಸಾಕ್ಷಿ ಕೊಯ್ತಾಕ್ಕೆ ಹಿಡಿಕೆ ಇತ್ತು ಆದರೆ ಇದಕ್ಕೆ ಹಿಡಿಕೆ ಇರುವುದಿಲ್ಲ, ಇದು ಹೌದೋ ಅಥವಾ ಅಲ್ಲ ಎಂದು ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಕಲ್ಲನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿ ಕಲ್ಲನ್ನು ನೋಡಿ ಗುರುತಿಸಿದ್ದರಿಂದ ಕಲ್ಲನ್ನು ಮು.ಮಾ-೧ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ನಾನು ನನ್ನ ಫಿರ್ಯಾದಿಯಲ್ಲಿ ಘಟನೆಯು ಜಮೀನಿನಲ್ಲಿ ಆಗಿರುತ್ತದೆ ಎಂದು ಹೇಳಿರುತ್ತೇನೆ, ನಂತರ ಘಟನೆಯು ಬೆಣ್ಣಿಶಿರೂರದಿಂದ ಮಾಡಿಯಾಳಕ್ಕೆ ಹೋಗುವ ಕಚ್ಚಾ ರಸ್ತೆಯ ಮೇಲೆ ನಡೆದಿರುತ್ತದೆ ಎಂದು ಹೇಳಿರುತ್ತೇನೆ ಎಂಧರೆ ಸರಿ. ಆರೋಪಿ ನಂ.೧ ನ್ಯಾಯಾಲಯದ ಮುಂದೆ ಇರುವ ಕೊಯ್ತಾದಿಂದಲೇ ಹೊಡೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗುರುತಿಸಲು ಆಗುತ್ತಿಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎಂ.ವಿ.ಇ. ವಕೀಲರಿಂದ**

ಆರೋಪಿ ನಂ.೧ ರಿಂದ ೪ ರವರಿಗೆ ನಾನು ನನ್ನ ತಂದೆ, ನನ್ನ ತಾಯಿ, ನನ್ನ ಸಹೋದರ ಹೊಡೆ ಬಡೆ ಮಾಡಿರುತ್ತೇವೆ, ಜೀವ ಬೆದರಿಕೆ ಹಾಕಿರುತ್ತೇವೆ ಎಂದು ಹೇಳಿ ಫಿರ್ಯಾದಿ ಸಲ್ಲಿಸಿರುತ್ತೇವೆ ಎಂದರೆ ಸಾಕ್ಷಿಯು ಫಿರ್ಯಾದಿ ಸಲ್ಲಿಸಿರುತ್ತಾರೆ, ಆದರೆ ನಾವು ಯಾವತ್ತು ಅವರನ್ನು ಹೊಡೆ ಬಡೆ ಮಾಡಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಫಿರ್ಯಾದಿ ಸಲ್ಲಿಸಿದ ನಂತರ ನಿಂಬರ್ಗಾ ಠಾಣಾ ಅಪರಾಧ ನಂ. ೨೧/೨೦೧೫ ಎಂದು ದಾಖಲಾಗಿರುತ್ತದೆ ಎಂದರೆ ಸರಿ. ನಂತರ ಪೋಲಿಸರು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ, ಅದರ ಸಿ.ಸಿ. ನಂ. ಇ೫೫/೨೦೧೫ ಇರುತ್ತದೆ ಎಂದರೆ ಸರಿ. ಸದರಿ ಪ್ರಕರಣ ಸಂಖ್ಯೆ ಇ೫೫/೨೦೧೫ ರಲ್ಲಿ ನಾವು ಆರೊಪಿತರು ಇರುತ್ತೇವೆ ಎಂದರೆ ಸರಿ. ಸದರಿ ಆರೊಪಿತರು ಫಿರ್ಯಾದಿ ಸಲ್ಲಿಸಿದ ಕಾರಣಕ್ಕಾಗಿ ಆ ಪ್ರಕರಣದಿಂದ ಉಳಿದುಕೊಳ್ಳಲು ಪೋಲಿಸರನ್ನು ಹಿಡಿದುಕೊಂಡು ಸುಳ್ಳು ಪಿರ್ಯಾದಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ ಅಲ್ಲ. ನನ್ನ ತಂದೆ ಮತ್ತು ಆರೊಪಿತರ ನಡುವೆ ದಿವಾಣಿ ಸ್ವರೂಪದ ದಾವೆ ಇರುತ್ತದೆ ಎಂದರೆ ಸರಿ. ಆರೋಪಿತರು ಸದರಿ ದಾವೆಯಲ್ಲಿ ಪ್ರತಿವಾದಿಯರು ಇರುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಅಷ್ಟೇನು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯು ಭಾಗಶಃ ಡಿಕ್ರಿ ಆದ ಕಾರಣ ನನ್ನ ತಂದೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮತ್ತು ಆರೋಪಿತರ ನಡುವೆ ಹೊಲದ ಸಲುವಾಗಿ ಮತ್ತು ಬೋರವೆಲ್ ಸಲುವಾಗಿ ತಕರಾರು ನಡೆದಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಅವರು ಅವರಿಗೆ ಸಂಬಂಧ ಎಂದು ನುಡಿಯುತ್ತಾರೆ. ನನ್ನ ತಂದೆಯವರು ಆರೋಪಿತರ ವಿರುದ್ದ ಬೋರನಲ್ಲಿ ಕಲ್ಲು ಹಾಕಿದ್ದಾರೆ ಮಣ್ಣು ಹಾಕಿ ಮುಚ್ಚಿದ್ದಾರೆ ಎಂದು ಪ್ರಕರಣವನ್ನು ದಾಖಲಿಸಿದ್ದರು, ಸದರಿ ಪ್ರಕರಣದಲ್ಲಿ ಆರೋಪಿತರು ಖುಲಾಸೆ ಆಗಿದ್ದಾರೆ ಎಂದರೆ ಸಾಕ್ಷಿ ಅದು ನಮ್ಮ ತಂದೆಯವರಿಗೆ ಗೊತ್ತು ಎಂದು ನುಡಿಯುತ್ತಾರೆ. ನಮ್ಮ ಮೇಲೆ ಆರೊಪಿತರು ಹಾಕಿರುವ ಪ್ರಕರಣವೂ ಸಹ ಕೂಡ ಖುಲಾಸೆ ಆಗಿರುತ್ತದೆ ಎಂಧರೆ ಸಾಕ್ಷಿ ನಮ್ಮ ತಂದೆಗೆ ಗೊತ್ತು ಎಂದು ನುಡಿಯುತ್ತಾರೆ. ಸದರಿ ಲಾರಿ ಬರಲು ದಾರಿ ಮಾಡುತ್ತಿದ್ದೆವು ಎಂದು ಹೇಳುತ್ತಿರಲ್ಲ, ಆ ಲಾರಿ ಸಂಖ್ಯೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅದರ ಲಾರಿ ಚಾಲಕ ಯಾರು ಅದರ ಮಾಲೀಕ ಯಾರು ಎಂದು ಹೇಳಲು ಬರುವುದಿಲ್ಲ, ಆದರೆ ಏಜೆಂಟನ ಹೆಸರು ಮಲ್ಲಿನಾಥ ನವಲಿ ಇರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಜಮೀನಿನ ಪಕ್ಕದಲ್ಲಿರುವ ಆರೋಪಿತರು ಲಾವಣಿ ಮಾಡಿರುವ ಜಮೀನಿನ ಮಾಲೀಕನ ಹೆಸರು ನನಗೆ ಗೊತ್ತಿಲ್ಲ, ಆದರೆ ಅಗಸಲಿ ರವರ ಹೊಲ ಅನ್ನುತ್ತಾರೆ ಎಂದು ನುಡಿಯುತ್ತಾರೆ. ನಾನು ಪೋಲಿಸರಿಗೆ ನನ್ನ ಪಿರ್ಯಾದಿಯಲ್ಲಿ ನಾನು ನಮ್ಮ ಜಮೀನಿನ ಪಕ್ಕದಲ್ಲಿರುವ ಜಮೀನಿನ ಮಾಲೀಕರ ಪರವಾನಿಗೆಯನ್ನು ಪಡೆದುಕೊಂಡು ನಾನು ದಾರಿ ಮಾಡಿಕೊಳ್ಳುತ್ತಿದ್ದೇನೆ ಎಂದು ಹೇಳಿ ಬರೆಸಿರುವುದಿಲ್ಲ.

ನಿಂಬರ್ಗಾದಲ್ಲಿ ಸರಕಾರಿ ಆಸ್ಪತ್ರೆ ಇರುತ್ತದೆ, ನಾನು ಅಲ್ಲಿಗೆ ಹೋಗಿ ಉಪಚಾರ ಪಡೆದುಕೊಂಡಿರುವುದಿಲ್ಲ. ನಾವು ಸರಕಾರಿ ಆಸ್ಪತ್ರೆ ಗುಲಬರ್ಗಾದಲ್ಲಿ ೭.೩೦ ಗಂಟೆಗೆ ಘಟನೆ ನಡೆದ ದಿನದಂದೇ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಏನು ಚಿಕಿತ್ಸೆ ಪಡೆದುಕೊಂಡಿರುತ್ತೇನೋ ಅದು ನಿಂಬರ್ಗಾ ಸರಕಾರಿ ಆಸ್ಪತ್ರೆಯಲ್ಲಿ ಸಿಗುತ್ತದೆ ಎಂದರೆ ಸಾಕ್ಷಿ ಗುಲಬರ್ಗದಲ್ಲಿ ಚೆನ್ನಾಗಿ ಚಿಕಿತ್ಸೆ ಸಿಗುತ್ತದೆ ಎಂದು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಘಟನೆ ನಡೆದ ತಕ್ಷಣ ನಾನು ನಿಂಬರ್ಗಾ ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ನಮ್ಮ ಊರಿನಿಂದ ನಿಂಬರ್ಗಾಕ್ಕೆ ಹೋಗಲು ೧೫ ನಿಮಿಷ ಸಾಕು. ನನ್ನ ತಂದೆಯವರು ಖಾಸಗಿ ಜೀಪಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಅದರ ಸಂಖ್ಯೆ, ಚಾಲಕ ಯಾರು ಎಂದು ಹೇಳಲು ಬರುವುದಿಲ್ಲ. ನಾನು ನನ್ನ ಹೇಳಿಕೆಯಲ್ಲಿ ನನ್ನ ತಂದೆಯವರು ನನಗೆ ಖಾಸಗಿ ವಾಹನದಲ್ಲಿ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ ಎಂದು ಹೇಳಿ ಬರೆಸಿರುವುದಿಲ್ಲ. ನಾನು ಘಟನೆ ಜಮೀನಿನಲ್ಲಿ ಆಗಿರುವುದಿಲ್ಲ, ಬೆಣ್ಣೆಶಿರೂರ-ಮಾಡಿಯಾಳಕ್ಕೆ ಹೋಗುವ ರಸ್ತೆಯಲ್ಲಿ ಆಗಿರುತ್ತದೆ ಎಂದು ಯಾವಾಗ ಮತ್ತು ಎಲ್ಲಿ ಹೇಳಿದ್ದೀರಾ ಎಂಧರೆ ಸಾಕ್ಷಿಯು ಆಸ್ಪತ್ರೆಯಲ್ಲಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಈ ವಿಷಯವನ್ನು ಆಸ್ಪತ್ರೆಯಲ್ಲಿ ಬಿಟ್ಟು ಬೇರೆಲ್ಲೂ ಹೇಳಿರುವುದಿಲ್ಲ ಎಂದರೆ ಸರಿ.

ಘಟನಾ ಸಮಯದಲ್ಲಿ ಎಷ್ಟು ಜನರು ನೆರೆದಿದ್ದರು ಎಂದು ನನಗೆ ನೆನಪಿಲ್ಲ. ಘಟನಾ ಸಮಯದಲ್ಲಿ ಆರೊಪಿತರು ಕಲ್ಲಿನಿಂದ ಹೊಡೆದರು ಎಂದು ಹೇಳುತ್ತಿರಲ್ಲ, ಕಲ್ಲು ಗುಂಡಗಿತ್ತೋ, ಚಪ್ಪಟಾಗಿತ್ತೋ ಎಂದು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ಪೋಲಿಸರಿಗೆ ಆರೋಪಿತರು ಕೊಯ್ತಾದಿಂದ ಹೊಡೆದಿರುತ್ತಾರೆ ಎಂದು ಹೇಳಿಕೆ ನೀಡಿರುತ್ತೇನೆ, ಆದರೆ ಅದಕ್ಕೆ ಹಿಡಿಕಿ ಇತ್ತೋ ಇಲ್ಲವೋ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕೊಯ್ತಾ ಮತ್ತು ಕಲ್ಲನ್ನು ಯಾರು ತೋರಿಸಿರುತ್ತಾರೆ, ಮತ್ತು ಯಾರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ದಿ.೨೦.೦೨.೨೦೧೫ ರಂದು ಸಾಯಂಕಾಲ ೫.೩೦ ಗಂಟೆಗೆ ನಮ್ಮ ಹೊಲದಲ್ಲಿ ಬೋರ್ ಖರಾಬ್ ಆಗಿತ್ತು, ಅದನ್ನು ರಿಪೇರಿ ಮಾಡಿಸುವ ಸಲುವಾಗಿ ಲಾರಿ ಬರಲು ದಾರಿ ಮಾಡುತ್ತಿದ್ದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿತರು ನಮ್ಮ ಬಾಜು ಇರುವ ಜಮೀನನ್ನು ಲಾವಣಿ ಮಾಡುತ್ತಿದ್ದರು, ಆ ಜಮೀನಿನ ಮಾಲೀಕರ ಮಾತನ್ನು ಕೇಳಿಕೊಂಡು ಸ್ವಲ್ಪ ದಾರಿ ಮಾಡಿಕೊಂಡಿದ್ದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆಗ ಆರೋಪಿ ನಂ.೧ ಮತ್ತು ೩ ರವರು ಅವಾಚ್ಯ ಶಬ್ದಗಳಿಂದ ಬಯ್ಯುತ್ತಾ ಬಂದರು, ಆರೊಪಿ ನಂ.೧ ರವರ ಕೈಯಲ್ಲಿ ಕೊಯ್ತಾ ಇತ್ತು, ಅದನ್ನು ತೆಗೆದುಕೊಂಡು ನನಗೆ ಹೊಡೆದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ, ನಾನು ತಪ್ಪಿಸಿಕೊಂಡೆನು ನಂತರ ನಾನು ತಪ್ಪಿಸಿಕೊಂಡು ಓಡಿ ಹೋಗುತ್ತಿರುವಾಗ ಆರೋಪಿ ನಂ.೩ ಕಲ್ಲು ತೆಗೆದುಕೊಂಡು ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ, ಅದು ನನ್ನ ಮುಂಡಿಗೆ ಹತ್ತಿ ನನಗೆ ತೀವ್ರ ಸ್ವರೂಪದ ಗಾಯವಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ.೪ ಕೈಯಿಂದ ನನ್ನ ಬೆನ್ನಿಗೆ ಹೊಡೆದಿರುತ್ತಾರೆ, ಆರೋಪಿ ನಂ.೨ ರವರು ಅವಾಚ್ಯ ಶಬ್ದಗಳಿಂದ ಬೈದು ಖಲಾಸ ಮಾಡಿ ಎಂದು ಪ್ರಚೋದನೆ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸದರಿ ಜಗಳವನ್ನು ಚಾಸಾ-೪ ರಿಂದ ೬ ರವರು ಬಿಡಿಸಿರುತ್ತಾರೆ, ಯಾರೋ ನನ್ನ ತಂದೆಗೆ ವಿಷಯ ಹೇಳಿರುತ್ತಾರೆ, ಅವರು ನಂತರ ಬಂದು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನಮ್ಮ ತಂದೆ ಬಂದ ನಂತರವೂ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ, ನನ್ನ ತಂದೆ ನನ್ನನ್ನು ಗುಲಬರ್ಗಾ ಸರಕಾರಿ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಪೋಲಿಸರು ದಿ.